ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate and Technical Education
Government of Karnataka

Unnatha Shikshna Soudha, Seshadri Road, Bengaluru – 560001; Phone: 08022223906; email: bngcce@kar.nic.in

ಸಂಖ್ಯೆ: ಕಾಶಿಇ/ಶೈವಿ/45/ಪ್ರವೇಶಾತಿ ಮಾರ್ಗಸೂಚಿ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು; ದಿನಾಂಕ:13/10/2022

## ಸುತ್ತೋಲೆ

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ/ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಗೆ ಸಂಬಂಧಿಸಿದ ಮಾರ್ಗಸೂಚಿಗಳು.

ಉಲ್ಲೇಖ: 1. ಕಾಶಿನಿ/ಶೈವಿ/06/1996-97 ದಿನಾಂಕ:04/07/1996
2. ಸರ್ಕಾರದ ಆದೇಶ ಸಂಖ್ಯೆ: ಇಡಿ 102 ಯು ಎನ್. ಇ 2009 ಬೆಂಗಳೂರು; ದಿನಾಂಕ:04.06.2009
3. ಕಾಶಿಇ/ಶೈವಿ/45/ಪ್ರವೇಶಾತಿ ಮಾರ್ಗಸೂಚಿ/2020-21; ದಿನಾಂಕ:14/07/2020

**************

ಸೂಚಿತ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿವಿಧ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಗೆ ಸಂಬಂದಿಸಿದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸುವಂತೆ ಸೂಚಿಸಲಾಗಿದೆ.

1. ಸರ್ಕಾರದ ಆದೇಶ ಸಂಖ್ಯೆ: ಇಡಿ 102 ಯು ಎನ್. ಇ 2009 ಬೆಂಗಳೂರು ದಿನಾಂಕ:04.06.2009 ರ ಅನ್ವಯ **ರಾಜ್ಯದ ಅನುದಾನಿತ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಸ್ತುತ ಲಭ್ಯವಿರುವ ಕೊರ್ ವಿಷಯ (Discipline Specific Core- DSC Subject) ಗಳಿಗೆ 15 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶಾತಿ ಮಾಡಬಾರದು.** ಹಾಗೂ ಒಂದು ವೇಳೆ 15 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದಲ್ಲಿ/ನೀಡಿದ್ದಲ್ಲಿ ಅವರಿಗೆ ಪ್ರತ್ಯೇಕ ಹೊಸ ಕೋರ್ಸು/ ವಿಷಯ/ ವಿಭಾಗ ತೆರೆಯದೇ ಕಾಲೇಜಿನಲ್ಲಿ ಹಾಲಿ ಲಭ್ಯವಿರುವ ಕೋರ್ಸು/ ವಿಷಯಗಳಿಗೆ ಪ್ರವೇಶಾತಿ ಮಾಡಿಕೊಳ್ಳುವುದು.

2. ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/ಶೈವಿ/120/ವಿ.ಪ್ರ.ಹೆ/2012-13; ದಿನಾಂಕ:30.05.2013ರ **ಅನ್ವಯ ಗೃಹ ವಿಜ್ಞಾನ ಮತ್ತು ಅದರ ಉಪ ವಿಭಾಗಗಳು, ಸಂಗೀತ, ಭೂ ವಿಜ್ಞಾನ, ಎಲೆಕ್ಟ್ರಾನಿಕ್ಸ್, ಸಂಖ್ಯಾಶಾಸ್ತ್ರ, ಮಹಿಳಾ ಅಧ್ಯಯನ, ಅಪರಾಧಶಾಸ್ತ್ರ, ಪತ್ರಿಕೋದ್ಯಮ ಈ ವಿಷಯಗಳ ವಿದ್ಯಾರ್ಥಿ ಪ್ರವೇಶ ಮಿತಿ ಕನಿಷ್ಠ 10** ಎಂದು ಸೂಚಿಸಲಾಗಿದೆ.

   ಈ ಕಛೇರಿ ಪತ್ರ ಸಂಖ್ಯೆ: ಕಾಶಿಇ/44/ಅ.ಉ.ನೇ/2012-13/ನೇಪಾವಿ-1 ದಿನಾಂಕ:10.07.2013ರ ಅನ್ವಯ **ಬಿ.ಎಸ್ಸಿ, ಬಿ.ಸಿ.ಎ, ಹಾಗೂ ಭಾಷಾ ಐಚ್ಛಿಕ ವಿಷಯಗಳಲ್ಲಿ ಕನಿಷ್ಠ 10 ಹಾಗೂ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪ್ರವೇಶಾತಿ ಇದ್ದಲ್ಲಿ ಸದರಿ ಕೋರ್ಸು/ ವಿಷಯಗಳನ್ನು ಪ್ರಾರಂಭಿಸತಕ್ಕದ್ದು/ ಮುಂದುವರೆಸತಕ್ಕದ್ದು.**

   **ಮೇಲೆ ತಿಳಿಸಿದ ಕೋರ್ಸು/ ವಿಷಯಗಳಿಗೆ ವಿದ್ಯಾರ್ಥಿ ಪ್ರವೇಶ ಸತತವಾಗಿ ಎರಡು ವರ್ಷ 15 ಕ್ಕಿಂತ ಕಡಿಮೆ ಇದ್ದು ಮೂರನೇ ವರ್ಷವೂ ಪ್ರವೇಶ 15 ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಕೋರ್ಸು/ ವಿಷಯಗಳನ್ನು ಮುಂದುವರೆಸದೆ ಇರುವುದು.**

3. ಸರ್ಕಾರದ ಆದೇಶ ಸಂಖ್ಯೆ: ಇಡಿ 164 ಯುಎನ್‌ಇ 2019 ದಿನಾಂಕ: 04.07.2020ರ ಅನ್ವಯ **ಐಚ್ಛಿಕ ಕನ್ನಡ ವಿಷಯದಲ್ಲಿನ ವಿದ್ಯಾರ್ಥಿಗಳ ಕನಿಷ್ಠ ಸಂಖ್ಯೆ 05ಕ್ಕೆ** ನಿಗಧಿಗೊಳಿಸಲು ಆದೇಶಿಲಾಗಿದೆ.

4. ಎನ್‌ಇಪಿ ಅಡಿ ನೀಡುತ್ತಿರುವ **ಎಲೆಕ್ಟೀವ್ ವಿಷಯ (Discipline Specific Elective- DSE Subject) ಮತ್ತು ಓಪನ್ ಎಲೆಕ್ಟೀವ್** ವಿಷಯಗಳಿಗೆ ಕನಿಷ್ಟ 15 ವಿದ್ಯಾರ್ಥಿಗಳು ಇರತಕ್ಕದ್ದು.

ಪ್ಯಾರಾ 1 ರಿಂದ 4 ರ ವರೆಗಿನ ಮಾರ್ಗಸೂಚಿಗಳಲ್ಲಿ ತಿಳಿಸಿರುವ ವಿದ್ಯಾರ್ಥಿ ಪ್ರವೇಶಾತಿ ಮಿತಿಗಿಂತ ಕಡಿಮೆ ಪ್ರವೇಶಾತಿ ಇದ್ದಲ್ಲಿ ಪ್ರಸ್ತುತ ಇರುವ ಕೋರ್ಸು/ ವಿಷಯಗಳಲ್ಲಿ ಪ್ರವೇಶಾತಿ ಪಡೆಯುವಂತೆ ಮನವೊಲಿಕೆ ಮಾಡುವುದು. ವಿದ್ಯಾರ್ಥಿ/ ಪೋಷಕರು ಒಪ್ಪದಿದ್ದಲ್ಲಿ ಕಾಲೇಜಿನ ಸಮೀಪ ಇರುವ ಮತ್ತೊಂದು ಕಾಲೇಜಿಗೆ ವಿದ್ಯಾರ್ಥಿಗಳನ್ನು ವರ್ಗಾವಣೆ ಮಾಡುವುದು.

**(ಮಾನ್ಯ ಆಯುಕ್ತರಿಂದ ಅನುಮೋದನೆಗೊಂಡಿದೆ)**

ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ